ಅಧ್ಯಕ್ಷರು : ಶೂನ್ಯವೇಳೆಯಲ್ಲಿ ಕೇಳಿ.....

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಕೇಳುವುದಲ್ಲ. ನಾಳೆ ಅಜೆಂಡಾದಲ್ಲಿ ಬರುವಂತೆ ಮಾಡಿ.

ಅಧ್ಯಕ್ಷರು : ಆಯಿತು.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬರಲಿಲ್ಲ.

ಅಧ್ಯಕ್ಷರು : ಅವರು ಉತ್ತರ ಕೊಟ್ಟಿದ್ದಾರೆ. ತಾವು ನಿಂತುಕೊಂಡು ಕೂಗಾಡಿದರೆ ಪ್ರಯೋಜನವಿಲ್ಲ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೇ, ಉತ್ತರ ಸಮರ್ಪಕವಾಗಿ ಬರಲಿಲ್ಲ....

ಅಧ್ಯಕ್ಷರು : ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶ ಇಲ್ಲ. ಕ್ಲಾರಿಫಿಕೇಶನ್ ಕೇಳಿದ್ದೀರಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದರು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಈ ವಿಚಾರದಲ್ಲಿ ನಿರುದ್ಯೋಗಿ ಯುವಕರ ಪರವಾಗಿ ಮಾತನಾಡಿದ್ದಾರೆ. ಅವರ ಮಾತಿನಲ್ಲೂ ಕೂಡ ಸ್ವಲ್ಪ ಅಂತಃಸತ್ವವಿರುವ ಕಾರಣಕ್ಕಾಗಿ ಸರ್ಕಾರ ಇದನ್ನು ಪುನರ್‌ಪರಿಶೀಲನೆ ಮಾಡುವ ವಿಚಾರದಲ್ಲಿ ಗಮನ ಕೊಡುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರ ಹಿಂದಿನ ಅಧಿವೇಶನದಲ್ಲಿಯೇ ನನಗೆ ಉತ್ತರ ಸಿಕ್ಕಿದೆ. ಆದರೆ ಏನೂ ಆಗಲಿಲ್ಲ.

ಅಧ್ಯಕ್ಷರು : ದಯಮಾಡಿ ಕೂರಬೇಕು. ಚರ್ಚೆಗೆ ಅವಕಾಶವಿಲ್ಲ. ಕ್ಲಾರಿಫಿಕೇಶನ್ ಕೇಳಿದಿರಿ ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಪರಿಶೀಲನೆ ಮಾಡುತ್ತೇನೆ ಅಂತ. ಆದ್ದರಿಂದ ತಾವು ಕುಳಿತುಕೊಳ್ಳಬೇಕು.

(ಈ) ವಿಷಯ: ಗದಗ್ ಜಿಲ್ಲೆಯಲ್ಲಿ ಬೀಜಕ್ಕಾಗಿ ಸಹಾಯಧನ ನೀಡುವ ಬಗ್ಗೆ.

ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಸಚಿವರು ಇಲ್ಲ. ನಮ್ಮಲ್ಲಿ ಗದಗ್ ಜಿಲ್ಲೆಯಲ್ಲಿ ಬೀಜಕ್ಕಾಗಿ ಸಹಾಯಧನ ಏನು ಕೊಟ್ಟಿದ್ದರು, ಅದನ್ನು ವಿತ್‌ಡ್ರಾ ಮಾಡಿಕೊಂಡಿದ್ದಾರೆ. ಅದಕ್ಕೆ ದಯವಿಟ್ಟು ವಿತ್‌ಡ್ರಾ ಮಾಡಿಕೊಂಡಿದ್ದರಿಂದ ನಮ್ಮಲ್ಲಿ ಜುಲೈ ಕೊನೆಯವರೆಗೂ ಬಿತ್ತಿಗೆ ಇರುತ್ತವೆ. ಮುಂಗಾರು ಬಿತ್ತಿಗೆ. ವಿತ್‌ಡ್ರಾ ಮಾಡಿಕೊಂಡಿದ್ದರಿಂದ ಆ ಭಾಗದ ರೈತರಿಗೆ ಸಾಕಷ್ಟು ತೊಂದರೆಯಾಗಿದೆ. ಅದಕ್ಕೆ ವಿತ್‌ಡ್ರಾ ಮಾಡಿದ್ದನ್ನು ಕೂಡಲೇ ರಿಲೀಜ್ ಮಾಡಬೇಕು ಇನ್ನೂ ಅಡಿಶನಲ್ subsidy ಅಮೌಂಟ್ ರಿಲೀಜ್ ಮಾಡಬೇಕು.

ಶ್ರೀ ಬಂಡೆಪ್ಪ ಕಾಶಂಪುರ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ, ಗದಗ್‌ನಲ್ಲಿ ಏನು ವಿತ್‌ಡ್ರಾ ಮಾಡಿಕೊಂಡಿದ್ದಾರೆಂದು ಅವರು ಹೇಳುತ್ತಿದ್ದಾರೆ ಆದರೆ ಅವರು ನನಗೆ ಮೊನ್ನೆಯೇ ಒಂದು ಅರ್ಜಿ ಸಲ್ಲಿಸಿದ್ದಾರೆ ಅದರ ಬಗ್ಗೆ ನಾನು ವಿಚಾರಿಸಿದ್ದೇನೆ. ಯಾವ ರೀತಿಯಲ್ಲೂ ವಿತ್‌ಡ್ರಾ ಮಾಡಿಕೊಂಡಿಲ್ಲ. 179 ಲಕ್ಷ ರೂ. ಏನು ಸ್ಯಾಂಕ್ಷನ್ ಇತ್ತು, ಅಲಾಟ್‌ಮೆಂಟ್ ಅಷ್ಟೂ ನಾವು ಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಅವರ ಜೊತೆ ಮಾತನಾಡಿದ್ದೇನೆ. 179 ಲಕ್ಷ ರೂ. ಇದ್ದುದ್ದನ್ನು 150 ರೂ. ಗೆ ಕಟ್ ಮಾಡಿದರು. ಆ 179 ಲಕ್ಷ ರೂ. ಸಾಲುವುದಿಲ್ಲ. ತಮಗೆ ಗೊತ್ತಿದೆ. ಜುಲೈ ಕೊನೆಯವರೆಗೂ ನಮ್ಮಲ್ಲಿ ಇರುತ್ತದೆ. ಅದು ಎಷ್ಟೇ ಇರಲಿ, ನೀವು ಕೊಡಿ. ನಾವು ರಿಲೀಜ್ ಮಾಡಿಕೊಳ್ಳುತ್ತಾ ಹೋಗುತ್ತೇವೆಂದು ಹೇಳಿ. ಸ್ವಲ್ಪ ಅಡ್ವಾನ್ಸ್ ಇಟ್ಟಿರಿ, ಡಿಸ್ಟ್ರಿಕ್ಟ್ ಹೆಡ್ ಕ್ವಾಟ್ರಸ್‌ನಲ್ಲಿ ಏನೂ ಆಗುವುದಿಲ್ಲ.

ಶ್ರೀ ಬಂಡೆಪ್ಪ ಕಾಶಂಪುರ : ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಅನ್ನದಾನಿ : ಮಾನ್ಯ ಅಧ್ಯಕ್ಷರೇ,.....

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಏನಾಗಿದೆ ಅಂದರೆ, ಮಾನ್ಯ ಡಿ.ಆರ್. ಪಾಟೀಲರು ಹೇಳತಕ್ಕಂಥ ಕಾಲದಲ್ಲಿ ಉಪ ಮುಖ್ಯಮಂತ್ರಿಗಳು ಗದಗ್‌ಗೆ ಬೀಗಸ್ಥನ ಮಾಡಿದ್ದಾರೆ. ಆಕ್ಟ್‌ಯಲಿ ಸಹಾಯ ಮಾಡುತ್ತೇನೆಂದು ಹೇಳಿದ್ದಾರೆ. ಇದು ಪರಿಣಾಮವಾಗಿದೆ.

(ಉ) ವಿಷಯ : ಒಂದನೇ ತರಗತಿಯಿಂದ ಆಂಗ್ಲಭಾಷೆಯನ್ನು ಕಲಿಸುವ ಬಗ್ಗೆ.

ಡಾ: ಕೆ. ಅನ್ನದಾನಿ (ಮಳವಳ್ಳಿ) : ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ. ಒಂದನೇ ತರಗತಿಯಿಂದ ಇಂಗ್ಲೀಷ್ ಭಾಷೆಯನ್ನು ಎಲ್ಲಾ ಶಾಲೆಗಳಲ್ಲೂ ಕೂಡ ಕಲಿಸಬೇಕು ಎನ್ನತಕ್ಕಂಥಾದ್ದು ಬಹಳ ದಿನಗಳ ಒಂದು ಬೇಡಿಕೆಯಾಗಿದೆ. ಆದರೆ ಇದರ ಬಗ್ಗೆ ಸರ್ಕಾರ ಇನ್ನೂ ಕೂಡ ಯಾವುದೇ ರೀತಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ಬಹುಶಃ ಈ ವಿಚಾರವಾಗಿ ರೈತರ ಮಕ್ಕಳ ಭವಿಷ್ಯ ಅಡಗಿದೆ. ಹಿಂದುಳಿದ ವರ್ಗದ ಮಕ್ಕಳ ಭವಿಷ್ಯ ಅಡಗಿದೆ, ದಲಿತ ಮಕ್ಕಳ ಭವಿಷ್ಯ ಅಡಗಿದೆ. ಒಟ್ಟಾರೆಯಾಗಿ ಗ್ರಾಮೀಣ ಪ್ರದೇಶದ ಎಲ್ಲಾ ಮಕ್ಕಳ ಭವಿಷ್ಯ ಅಡಗಿದೆ. ಅವರ ಬದುಕು, ಜೀವನ ಎಲ್ಲವೂ ಕೂಡ ಇದರಲ್ಲಿ ಅಡಗಿದೆ. ನಾನು ಬಹಳ ಮುಖ್ಯವಾಗಿ ಹೇಳತಕ್ಕಂಥಾದ್ದು ಏನೆಂದರೆ ನಾನು ಕಳೆದ ಅಧಿವೇಶನದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಇವತ್ತಿನವರೆಗೂ ಕೂಡ ಸರ್ಕಾರ ಅದರ ಬಗ್ಗೆ ಯಾವುದೇ ರೀತಿಯಾದ ಕ್ರಮವನ್ನು ತೆಗೆದುಕೊಳ್ಳದೇ ಇರತಕ್ಕಂಥಾದ್ದು ನಿಜವಾಗಲೂ ಕೂಡ ನಮಗೆ ನೋವನ್ನು ತರತಕ್ಕಂಥ ವಿಚಾರ. ಬಹುಶಃ ಒಂದೇ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಸರ್ಕಾರಿ ಶಾಲೆಗಳು, ಸರ್ಕಾರಿ ಕನ್ನಡ ಶಾಲೆಗಳು ಮಾಧ್ಯಮ ಶಾಲೆಗಳು ಇವತ್ತು ಏನಾದರೂ ಉಳಿಸಬೇಕು, ಉಳಿದುಕೊಳ್ಳಬೇಕು ಅಂದರೆ ಕನ್ನಡ ಮಾಧ್ಯಮ ಸರ್ಕಾರಿ ಶಾಲೆಗಳಲ್ಲಿ ಕಡ್ಡಾಯವಾಗಿ ಇಂಗ್ಲೀಷ್ ಭಾಷೆಯನ್ನು ಈ ವರ್ಷದಿಂದ ಕಲಿಸಿದರೆ ಮಾತ್ರ ಶಾಲೆಗಳು ಉಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ನನ್ನ ಕ್ಷೇತ್ರದಲ್ಲಿ ಒಂದೇ ಒಂದು ಗ್ರಾಮ ಚಿಕ್ಕಂದೊಡ್ಡಿ ಅಂತ ಹೇಳಿ ಇದೆ ಅಲ್ಲಿ 50 ಮನೆಗಳು ಇದೆ. 50 ಮನೆಗಳಲ್ಲಿ ಸರ್ಕಾರಿ ಶಾಲೆಗೆ ಬರತಕ್ಕಂಥ ಮಗು ಒಂದೇ ಒಂದು. ಈ ವರ್ಷ ಪ್ರವೇಶ ಪಡೆದುಕೊಂಡಿರತಕ್ಕಂಥಾದ್ದು,